ದಿನಾಂಕ 02-02-2024 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** ಪ್ರತಿವಾದಿ ಪರ ಶ್ರೀ ಡಿ ಕೆ ಜಿ ವಕೀಲರಿಂದ .

ನಾನು 7 ನೇ ತರಗತಿಯ ವರೆಗೆ ಉರ್ದು ಭಾಷೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ತಂದಗೆ 85 ವರ್ಷಗಳು. ವಾದಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯನುಡಿಯಬಹುದು ಎಂದರೆ ಸಾಕ್ಷಿಯು ಅವರಿಗೆ ನಡೆಯಲು ಬರುವುದಿಲ್ಲ ಎನ್ನುತ್ತಾರೆ. ವಾದಿಯು ನ್ಯಾಯಾಲಯಕ್ಕೆ ಬಂದು ಬಂದು ಕುಳಿತು ಸಾಕ್ಷ್ಯನುಡಿಯಬಹುದು ಎಂದರೆ ಸಾಕ್ಷಿ ಅವರಿಗೆ ನೆನಪಿನ ಶಕ್ತಿ ಕಡಿಮೆ ಆಗಿದೆ ಎನ್ನುತ್ತಾರೆ. ವಾದಿಯು ತನ್ನ ವ್ಯವಹಾರಗಳನ್ನು ತಾನೇ ಸ್ವಂತ ಮಾಡುತ್ತಿದ್ದನು. ವಾದ ಪತ್ರಕ್ಕೆ ನನ್ನ ತಂದೆ ಹೇಳಿದಂತೆ ಮಾಹಿತಿಯನ್ನು ನಾನು ವಕೀಲರಿಗೆ ನೀಡಿರುತ್ತೇನೆ. ನಾನು ಸಲ್ಲಿಸಿರುವ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿದ್ದೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ನನ್ನ ತಂದೆ ಹಾಗೂ ಪ್ರತಿವಾದಿಯು ಖಾಸಾ ಸಹೋದರರು ಆಗಿದ್ದು, ಅವರಿಬ್ಬರ ತಂದೆ ಬಹಳ ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ ಎಂದು ನ್ಯಾಯಾಲಯಕ್ಕೆ ತಪ್ಪು ಗ್ರಹಿಕೆ ಬರಲು ಆ ರೀತಿ ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜನಿಗೆ ನನ್ನ ತಂದೆ ಮತ್ತು ಪ್ರತಿವಾದಿ ಮಾತ್ರ ಮಕ್ಕಳು ಎನ್ನುವ ತಪ್ಪು ಕಲ್ಪನೆ ಬರಲು ಆ ರೀತಿ ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜನಿಗೆ 4 ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ಗಂಡು ಮಕ್ಕಳು ಯಾರೆಂದರೆ ವಾದಿ, ಪ್ರತಿವಾದಿ, ಅಬ್ದುಲ್ ಗಣಿ ಹಾಗೂ ಅಕ್ಬರ್ ಸಾಬ ಆಗಿರುತ್ತಾರೆ ಎಂದರೆ ಸರಿ. ಹೆಣ್ಣು ಮಕ್ಕಳು ಯಾರೆಂದರೆ ನಸೀಮಾಬಿ ಮತ್ತು ಸಫೀಯಾ ಎಂದರೆ ಸರಿ. ಗಂಡು ಮಕ್ಕಳ ಪೈಕಿ ಅಬ್ದುಲ್ ಗಣಿ ಶಿಕ್ಷಕರಾಗಿದ್ದರು ಹಾಗೂ ಅವರು ಮತ್ತು ಇನ್ನೊಬ್ಬ ಮಗನಾದ ಅಕ್ಬರ್ ಸಾಬ ತೀರಿಕೊಂಡಿದ್ದಾರೆ ಎಂದರೆ ಸರಿ. ಸದರಿ ಅಬ್ದುಲ್ ಗಣಿ ಮತ್ತು ಅಕ್ಬರ ಸಾಬ ರವರಿಗೆ ಹೆಂಡತಿ ಮಕ್ಕಳು ಇದ್ದಾರೆ ಎಂದರೆ ಸರಿ. ಅವರಿಬ್ಬರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಅದೇ ರೀತಿ ನಸೀಮಾಬಿ ಮತ್ತು ಸಫೀಯಾ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ಅವರು ಈ ದಾವೆಗೆ ಸಂಬಂಧ ಪಡುವುದಿಲ್ಲ ಎನ್ನುತ್ತಾರೆ.

ಈ ದಾವೆಯಲ್ಲಿ ನನ್ನ ತಂದೆಯು ದಾವಾ ಆಸ್ತಿಯಲ್ಲಿ ತನಗೆ ಅರ್ಧ ಹಿಸ್ಸೆ ಬೇಕೆಂದು ಕೇಳಿಕೊಂಡಿದ್ದಾರೆ ಎಂದರೆ ಸರಿ. ಈಗ ಸಾಕ್ಷಿಗೆ ಒಂದು ಭಾವಚಿತ್ರ ತೋರಿಸಿ ಸದರಿ

ಭಾವಚಿತ್ರದಲ್ಲಿ ಕಂಡು ಬರುವ ಮನೆಯು ಅಬ್ದುಲ್ ಗಣಿ ರವರ ಮನೆ ಹಾಗೂ ಇನ್ನೊಂದು ದಾಖಲೆ ತೋರಿಸಿ ಸದರಿ ದಾಖಲೆಯು ಅಬ್ದುಲ್ ಗಣಿ ರವರ ಮನೆಗೆ ಸಂಬಂಧಿಸಿದ ಆಸ್ತಿ ತೆರಿಗೆ ರಜಿಸ್ಟರ ಆಗಿರುತ್ತದೆ ಎಂದು ಸೂಚಿಸಲಾಗಿ ಸಾಕ್ಷಿಯು ಸದರಿ ಭಾವಚಿತ್ರ ಮತ್ತು ದಾಖಲೆಯನ್ನು ನೋಡಿ ಒಪ್ಪಿಕೊಂಡಿದ್ದರಿಂದ ಅವುಗಳನ್ನು ಕ್ರಮವಾಗಿ ನಿಡಿ 1 ಮತ್ತು ನಿಡಿ 2 ಎಂದು ಗುರುತಿಸಲಾಯಿತು. ನಿಡಿ 2 ರಲ್ಲಿ ನಮೂದಿಸಿದ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಈ ದಾವೆಗೆ ಸದರಿ ಆಸ್ತಿ ಸಂಬಂಧ ಪಡುವುದಿಲ್ಲ ಎನ್ನುತ್ತಾರೆ. ಈಗ ಸಾಕ್ಷಿಗೆ ಎರಡು ಭಾವಚಿತ್ರ ಮತ್ತು ಒಂದು ದಾಖಲೆ ತೋರಿಸಿ ಸದರಿ ಭಾವಚಿತ್ರದ ಪೈಕಿ ಒಂದು ಭಾವಚಿತ್ರದಲ್ಲಿ ಕಂಡು ಬರುವ ಈಗಾಗಲೇ ಕಟ್ಟಿರುವ ಮನೆ ನಿಮ್ಮ ಮನೆ ಎಂದು, ಇನ್ನೊಂದು ಭಾವಚಿತ್ರದಲ್ಲಿ ಕಂಡುಬರುವ ಕಟ್ಟುತ್ತಿರುವ ಮನೆ ನಿಮ್ಮ ಮನೆ ಎಂದು ಸೂಚಿಸಲಾಗಿ ಹಾಗೂ ಸದರಿ ಮನೆಗಳ ಆಸ್ತಿ ತೆರಿಗೆ ರಜಿಸ್ಟರ ದಾಖಲೆ ಇದೆ ಆಗಿರುತ್ತದೆ ಎಂದು ಸೂಚಿಸಲಾಗಿ ಸಾಕ್ಷಿಯು ಸದರಿ ಭಾವಚಿತ್ರಗಳನ್ನು ಮತ್ತು ಆಸ್ತಿ ತೆರಿಗೆ ರಜಿಸ್ಟರ ಅನ್ನು ನೋಡಿ ಒಪ್ಪಿಕೊಂಡಿದ್ದರಿಂದ ಅವುಗಳನ್ನು ನಿಡಿ 3 ರಿಂದ 5 ಎಂದು ಗುರುತಿಸಲಾಯಿತು. ನಿಡಿ 3 ಮತ್ತು 4 ರಲ್ಲಿ ಕಂಡುಬರುವ ಮನೆಯ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ಸದರಿ ಮನೆಗಳು ತನ್ನ ತಾಯಿಗೆ ಸೇರಿದ ಮನೆಗಳು ಎನ್ನುತ್ತಾರೆ.

ಈಗ ಸಾಕ್ಷಿಗೆ ಒಂದು ಭಾವಚಿತ್ರ ತೋರಿಸಿ ಸದರಿ ಭಾವಚಿತ್ರದಲ್ಲಿ ಕಂಡು ಬರುವ ಮನೆಗಳು ಅಕ್ಬರ್ ಸಾಬ್ ರವರ ಮನೆಯ ಚಾಳ್ ಆಗಿರುತ್ತದೆ ಹಾಗೂ ಇನ್ನೊಂದು ದಾಖಲೆ ತೋರಿಸಿ ಸದರಿ ದಾಖಲೆಯು ಅಕ್ಬರ್ ಸಾಬ್ ರವರ ಮನೆಯ ಚಾಳ್ ಗೆ ಸಂಬಂಧಿಸಿದ ಆಸ್ತಿ ತೆರಿಗೆ ರಜಿಸ್ಟರ ಆಗಿರುತ್ತದೆ ಎಂದು ಸೂಚಿಸಲಾಗಿ ಸಾಕ್ಷಿಯು ಸದರಿ ಭಾವಚಿತ್ರ ಮತ್ತು ದಾಖಲೆಯನ್ನು ನೋಡಿ ಒಪ್ಪಿಕೊಂಡಿದ್ದರಿಂದ ಅವುಗಳನ್ನು ಕ್ರಮವಾಗಿ ನಿಡಿ 6 ಮತ್ತು ನಿಡಿ 7 ಎಂದು ಗುರುತಿಸಲಾಯಿತು.

ದಾವಾ ಆಸ್ತಿಯ ಪೂರ್ವಕ್ಕೆ ಕಲಾಲ್ ರವರ ಮನೆ ಬರುತ್ತದೆ. ಆ ರೀತಿ ಪೂರ್ವಕ್ಕೆ ಅವರ ಮನೆ ಬರುತ್ತದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಪಶ್ಚಿಮಕ್ಕೆ ಹನುಮಂತ ರವರ ಮನೆ ದಾವಾ ಆಸ್ತಿಗೆ ಹೊಂದಿಕೊಂಡು ಇರುತ್ತದೆ. ದಾವಾ ಆಸ್ತಿಯ ಪಶ್ಚಿಮಕ್ಕೆ ಹೊಂದಿಕೊಂಡು ರಸ್ತೆ ಇದೆ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ನಾಗರಾಜ ವಡ್ಡರ ರವರ ಮನೆ ಇರುತ್ತದೆ. ಉತ್ತರಕ್ಕೆ ರಸ್ತೆ ಇರುತ್ತದೆ. ಉತ್ತರಕ್ಕೆ ಇರುವ ರಸ್ತೆ ದಾಂಡೇಲಿ–ಯಲ್ಲಾಪುರ ರಸ್ತೆ ಆಗಿರುತ್ತದೆ ಹಾಗೂ ಅದಕ್ಕೆ ಚರ್ಚ ರೋಡ್ ಎಂದು ಕರೆಯುತ್ತಾರೆ. ದಕ್ಷಿಣಕ್ಕೆ ನಾಗರಾಜ ರವರ ಮನೆ ಇರುತ್ತದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ.

ದಾವಾ ಆಸ್ತಿಯ ಅಗಲ ಅಂದಾಜು 16 ಅಡಿ ಹಾಗೂ ಉದ್ದ ಅಂದಾಜು 25 ಅಡಿ ಇರಬಹುದು. ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ 222 ಚದರ ಅಡಿ ಇರುತ್ತದೆ. ದಾವಾ ಆಸ್ತಿಯ ಉದ್ದಳತೆಯನ್ನು ವಾದಪತ್ರದಲ್ಲಿ ಹಾಗೂ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ದಾವಾ ಆಸ್ತಿಯು ವ್ಯಾಪಾರ ಕೇಂದ್ರದಲ್ಲಿ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಅಂದಾಜು ಮಾರುಕಟ್ಟೆ ಮೌಲ್ಯ ಸುಮಾರು 10 ಲಕ್ಷ ಆಗಬಹುದು. ಪ್ರತಿವಾದಿ ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸಿದ್ದಾನೆ ಎಂದರೆ ಸರಿ. ಸದರಿ ಪ್ರತಿವಾದ ಪತ್ರವನ್ನು ನಾನು ಮತ್ತು ವಾದಿ ಕೇಳಿ ತಿಳಿದುಕೊಂಡಿದ್ದೇವೆ. ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ದಾವಾ ಆಸ್ತಿಗೆ ವಾದಿಯು ಯಾವುದೇ ರೀತಿಯಿಂದ ಸಂಬಂಧಪಡುವುದಿಲ್ಲ ಹಾಗೂ ದಾವಾ ಆಸ್ತಿಯು ಪ್ರತಿವಾದಿಯ ಸ್ವಂತ ಆಸ್ತಿ ಎಂದು ತಕರಾರು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಮೂಲ ಮಾಲೀಕರು ಹಳಿಯಾಳ ಪುರಸಭೆ ಆಗಿರುತ್ತದೆ. ದಾವಾ ಆಸ್ತಿಯನ್ನು ಪುರಸಭೆ ಹಳಿಯಾಳ ಕಡೆಯಿಂದ ಪ್ರತಿವಾದಿ ತನ್ನ ಹೆಸರಲ್ಲಿ ಖರೀದಿಸಿದ ಆಸ್ತಿ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಮುಂದುವರೆದು ವಾದಿ ಮತ್ತು ಪ್ರತಿವಾದಿ ಕೂಡಿ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎನ್ನುತ್ತಾರೆ. ಖರೀದಿಯ ನಿಖರ ದಿನಾಂಕ ಗೊತ್ತಿಲ್ಲ ಆದರೆ 1984 ರಲ್ಲಿ ಖರೀದಿ ಆಗಿರುತ್ತದೆ. ದಿನಾಂಕ 20-02-1984 ರಂದು ಕೇವಲ ಪ್ರತಿವಾದಿಯ ಹೆಸರಲ್ಲಿ ಖರೀದಿ ಪತ್ರ ಆಗಿ ಆತನ ಹೆಸರು ಮಾತ್ರ ದಾಖಲೆಗಳಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ. 1986 ರಲ್ಲಿ ನನ್ನ ತಂದೆಯ ಹೆಸರು ದಾವಾ ಆಸ್ತಿಯ ದಾಖಲೆಗಳಿಗೆ ದಾಖಲಾಗಿರುತ್ತದೆ. ದಾವಾ ಆಸ್ತಿಯಲ್ಲಿ ವಾದಿಗೆ ಅರ್ಧ ಹಿಸ್ಸೆ ಇದೆ ಎಂದು ಯಾವ ಆಧಾರದಲ್ಲಿ ಕೇಳುತ್ತೀರಿ ಎಂದರೆ ಸಾಕ್ಷಿಯು ಸಿ ಟಿ ಸರ್ವೇ ದಾಖಲೆ, ಪುರಸಭೆ ದಾಖಲೆ ಹಾಗೂ ಕಬ್ಜೆ ಆಧಾರದ ಮೇಲೆ ಆ ರೀತಿ ಹಿಸ್ಸೆ ಇರುತ್ತದೆ ಎಂದು ಕೇಳುತ್ತಿದ್ದೇವೆ ಎನ್ನುತ್ತಾರೆ. ವಾದಿ ಮತ್ತು ಪ್ರತಿವಾದಿ ಸೇರಿ ಸಾಮಾಯಿಕವಾಗಿ ದುಡ್ಡನ್ನು ನೀಡಿ ಪ್ರತಿವಾದಿಯ ಹೆಸರಲ್ಲಿ ದಾವಾ ಆಸ್ತಿಯನ್ನು ಖರೀದಿ ಮಾಡಲಾಗಿರುತ್ತದೆ. ವಾದಿ ಮತ್ತು ಪ್ರತಿವಾದಿ ಇಬ್ಬರೂ ಸಹ ಅರ್ಧ ಅರ್ಧ ಪ್ರತಿಫಲ ಹಣವನ್ನು ನೀಡಿ ದಾವಾ ಆಸ್ತಿಯನ್ನು ಖರೀದಿಸಿದ್ದು ನಿಜವೇ ಆಗಿದ್ದರೆ ಪ್ರತಿವಾದಿಯ ಹೆಸರಲ್ಲಿ ಮಾತ್ರ ಖರೀದಿ ಪತ್ರ ಏಕೆ ಆಯಿತು ಎಂದರೆ ಸಾಕ್ಷಿಯು ಇಬ್ಬರ ಪೈಕಿ ಒಬ್ಬರ ಹೆಸರಲ್ಲಿ ಮಾತ್ರ ಖರೀದಿ ಪತ್ರ ಮಾಡಬೇಕಾಗಿದ್ದರಿಂದ ಪ್ರತಿವಾದಿಯ ಹೆಸರಲ್ಲಿ ಖರೀದಿ ಪತ್ರ ಆಯಿತು ಎನ್ನುತ್ತಾರೆ. ಸಾಮಾನ್ಯವಾಗಿ ಕುಟುಂಬದ ಹಿರಿಯರ ಹೆಸರಲ್ಲಿ ಖರೀದಿ ಪತ್ರ ಆಗುತ್ತವೆ ಎಂದರೆ ಸರಿ. ಪ್ರತಿವಾದಿಯು ವಾದಿಗಿಂತ ವಯಸ್ಸಲ್ಲಿ ಚಿಕ್ಕವನು ಎಂದರೆ ಸರಿ. ದಿನಾಂಕ 20-02-1984 ರಂದು ಪ್ರತಿವಾದಿಯ ಹೆಸರಲ್ಲಿ ಖರೀದಿ ಪತ್ರ

ಆಗುವ ಸಮಯದಲ್ಲಿ ಉಪ-ನೋಂದಣಾಧಿಕಾರಿ ಕಚೇರಿಯಲ್ಲಿ ವಾದಿ ಇದ್ದನೋ ಇಲ್ಲವೋ ಎಂದರೆ ಸಾಕ್ಷಿಯು ಇದ್ದರು ಎನ್ನುತ್ತಾರೆ. ಆಗ ನಾನು ಸದರಿ ಕಚೇರಿಯಲ್ಲಿ ಇರಲಿಲ್ಲ. ವಾದಿ ಹೇಳುವ ಮಾಹಿತಿಯ ಆಧಾರದ ಮೇಲೆ ಖರೀದಿ ಸಮಯದಲ್ಲಿ ವಾದಿ ಸದರಿ ಕಚೇರಿಯಲ್ಲಿ ಇದ್ದನು ಎಂದು ಹೇಳುತ್ತಿದ್ದೇನೆ ಎಂದರೆ ಸರಿ. ಸದರಿ ಖರೀದಿ ಪತ್ರವನ್ನು ವಾದಿ ಓದಿದ್ದಾರೋ ಇಲ್ಲವೋ ಎಂದರೆ ಸಾಕ್ಷಿಯು ವಾದಿಗೆ ಕನ್ನಡ ಓದಲು ಬರುವುದಿಲ್ಲ ಎನ್ನುತ್ತಾರೆ. ದಾವೆ ಸಲ್ಲಿಸುವ ಸಮಯದಲ್ಲಿ ಸದರಿ ಖರೀದಿ ಪತ್ರದ ಬಗ್ಗೆ ವಾದಿಯು ತನ್ನ ವಕೀಲರ ಮೂಲಕ ಕೇಳಿ ತಿಳಿದುಕೊಂಡಿದ್ದಾರೆ. ಅದೇ ರೀತಿ ನಾನು ಸಹ ನನ್ನ ಪ್ರಮಾಣ ಪತ್ರ ತಯಾರಿಸುವ ಸಮಯದಲ್ಲಿ ಸದರಿ ಖರೀದಿ ಪತ್ರದ ಬಗ್ಗೆ ವಕೀಲರಿಂದ ಕೇಳಿ ತಿಳಿದುಕೊಂಡಿದ್ದೇನೆ. ಖರೀದಿ ಪತ್ರದಲ್ಲಿ ವಾದಿ ಮತ್ತು ಪ್ರತಿವಾದಿ ಕೂಡಿ ಹಣ ಕೊಟ್ಟ ಬಗ್ಗೆ ಹಾಗೂ ಕೂಡಿ ಖರೀದಿ ಹಿಡಿದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಇಬ್ಬರೂ ಸಹ ಖರೀದಿಸಿದ್ದರೂ ಪ್ರತಿವಾದಿಯ ಹೆಸರಲ್ಲಿ ಮಾತ್ರ ಖರೀದಿ ಆಗಿದೆ ಎನ್ನುತ್ತಾರೆ. ಸದರಿ ಖರೀದಿ ಪತ್ರಕ್ಕೆ ನನ್ನ ತಂದೆ ಸಾಕ್ಷಿದಾರನಾಗಿ ಅಥವಾ ಬೇರೆ ಯಾವುದೇ ರೂಪದಲ್ಲಿ ಸಹಿ ಮಾಡಿಲ್ಲ ಎಂದರೆ ಸರಿ. ಪ್ರತಿವಾದಿ ದಾವಾ ಆಸ್ತಿಯನ್ನು ಸ್ವಂತ ಖರೀದಿಸಿದ್ದರೂ ಸಹ ಆತನು ಅನಕ್ಷರಸ್ಥ ಆಗಿದ್ದರಿಂದ ನ್ಯಾಯಾಲಯದಲ್ಲಿ ಮೊದಲ ಬಾರಿಗೆ ದಾವಾ ಆಸ್ತಿಯನ್ನು ವಾದಿ ಮತ್ತು ಪ್ರತಿವಾದಿ ಇಬ್ಬರೂ ಹಣ ಕೊಟ್ಟು ಖರೀದಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರ ಅಥವಾ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದಿ ಮತ್ತು ಪ್ರತಿವಾದಿ ಕೂಡಿ ಹಣ ಹಾಕಿ ದಾವಾ ಆಸ್ತಿ ಖರೀದಿಸಲಾಗಿದೆ ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ಖರೀದಿ ದಿನಾಂಕದಂದು ವಾದಿ ಮತ್ತು ಪ್ರತಿವಾದಿಯ ಹೆಸರಲ್ಲಿ ದಾವಾ ಆಸ್ತಿಯನ್ನು ಖರೀದಿಸಲು ಬರುತ್ತಿತ್ತು ಎಂದರೆ ಸರಿ. ದಿನಾಂಕ 24-02-1984 ರಂದು ಪ್ರತಿವಾದಿಯ ಹೆಸರು ದಾವಾ ಆಸ್ತಿಯ ದಾಖಲೆಗೆ ದಾಖಲು ಆಗುವಾಗ ವಾದಿಯ ಹೆಸರು ಸಹ ದಾಖಲು ಆಗಲು ಬರುತ್ತಿತ್ತು ಎಂದರೆ ಸಾಕ್ಷಿಯು ಎರಡು ವರ್ಷಗಳ ನಂತರ ವಾದಿಯ ಹೆಸರು ದಾಖಲು ಆಗಿದೆ ಎನ್ನುತ್ತಾರೆ. ಖರೀದಿ ಆದ ನಂತರ ಎರಡು ವರ್ಷಗಳ ವರೆಗೆ ವಾದಿಯ ಹೆಸರು ದಾವಾ ಆಸ್ತಿಯ ದಾಖಲೆಗಳಲ್ಲಿ ಏಕೆ ನಮೂದು ಆಗಲಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿ ವಾದಿಯ ತಮ್ಮ ಇರುವುದರಿಂದ ಆ ರೀತಿ ಎರಡು ವರ್ಷಗಳ ವರೆಗೆ ವಾದಿಯ ಹೆಸರು ನಮೂದು ಆಗಲಿಲ್ಲ ಎನ್ನುತ್ತಾರೆ. ದಾವಾ ಆಸ್ತಿಯ ಸ್ವಾಧೀನದಲ್ಲಿ ವಾದಿ 1986 ರಿಂದ ಇರುತ್ತಾನೆ. ಸಾಕ್ಷಿ ಮುಂದುವರೆದು ದಾವಾ ಆಸ್ತಿಯಲ್ಲಿ ತಾನೂ ಸಹ ಆಗಿನಿಂದ ಗ್ಯಾರೇಜ್ ನಡೆಸುತ್ತೇನೆ ಎನ್ನುತ್ತಾರೆ.

(**ನ್ಯಾಯಾಲಯದ ಟಿಪ್ಪಣಿ:** ಸಾಕ್ಷಿಗೆ ಪ್ರತಿವಾದಿ ಪರ ವಕೀಲರು ಆತನಿಗೆ ತಿಳಿಯುವಂತೆ ನೇರವಾದ ಪ್ರಶ್ನೆಗಳನ್ನು ಹಾಕುತ್ತಿದ್ದರೂ ಸಹ ಸಾಕ್ಷಿಯು ಪ್ರತಿವಾದಿ ಪರ ವಕೀಲರಿಗೆ ಎದುರು ಪ್ರಶ್ನೆ ಮಾಡುವುದು ಹಾಗೂ ಸಂಬಂಧಪಡದ ವಿಷಯಗಳ ಬಗ್ಗೆ ಪ್ರತಿವಾದಿ ಪರ ವಕೀಲರನ್ನೇ ಕೇಳುತ್ತಿರುವುದು ಕಂಡು ಬಂದಿರುತ್ತದೆ. ಈ ಬಗ್ಗೆ ಸಾಕ್ಷಿಗೆ ತಿಳುವಳಿಕೆ ಹೇಳಿದರೂ ಸಹ ಅದೇ ರೀತಿ ಮುಂದುವರೆಸಿಕೊಂಡು ಬರುತ್ತಿದ್ದಾರೆ. ಸಾಕ್ಷಿಗೆ ಅವರ ಪರ ವಕೀಲರಿಂದ ತಿಳುವಳಿಕೆ ನೀಡಲು ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.